ಲಿಲ್ಲ. ನಾನು ಬಂದ ಮೇಲೆ ಈ ವಿಚಾರವಾಗಿ ಕಾಗದ ಬರೆದಿದ್ದೇನೆ. ಆದಷ್ಟು ಬೇಗ ಈ ವಿಚಾರದಲ್ಲಿ ಸಮಿಕ್ಷೆ ಮಾಡಿಸಿಬಿಟ್ಟು ಬೆಂಗಳೂರು ಸಿಟಿ ಕಾರ್ಪೋರೇಷನ್‌ನವರು ಕೆ. ಎಸ್, ಆರ್. ಟಿ. ಸಿ. ಗೆ ಕೊಟ್ಟರೆ ಸಾಕಷ್ಟು ಅನಾನುಕೂಲವನ್ನು ಅಲ್ಲಿ ಪ್ರಯಾಣಿಕರಿಗೆ ಮಾಡಲು ಸಾಧ್ಯವಾಗುತ್ತದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಬೆಂಗಳೂರು ಸಿಟಿ ಕಾರ್ಪೋರೇಷನ್‌ನವರು ಅಷ್ಟು ಸಲೀಸಾಗಿ ಕೊಡುವುದಿಲ್ಲ. ತಾವು ತಮ್ಮ ಇಲಾಖೆಯಿಂದ ಬೇಡಿಕೆಯನ್ನು ಇಟ್ಟು ಅದನ್ನು ಮೂವ್‌ಮಾಡಿ ಆದಷ್ಟು ಜಾಗತೆ ಕೊಡುತ್ತಾರೆಂದು ನಂಬಿಕೊಂಡಿದ್ದೇವೆ. ದಯವಿಟ್ಟು ತಮ್ಮ ಇಲಾಖೆಯ ಮೂಲಕ ಇದನ್ನು ಮೂವ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ ಜೆ. ಜಾರ್ಜ್.—ಅಧ್ಯಕ್ಷರೇ ಈಗಾಗಲೇ ಹೇಳಿದ್ದೇನೆ. ಹಿಂದಿನ ಸಾರಿಗೆ ಸಚಿವರು ಮಿಟಿಂಗ್ ಕರಿಸಿದಾಗ ಅವರು ಒಪ್ಪಿದ್ದರು. ಮತ್ತೆ ನಾನು ಸಾರಿಗೆ ಸಚಿವನಾದ ಮೇಲೆ ಕಾಗದ ಬರೆದಿದ್ದೇನೆ. ಇನ್ನೊಂದು ಸಭೆಯನ್ನು ಕರೆಸಿ ಅವರು ಆ ಜಾಗವನ್ನು ಕೊಡುವಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಜೆ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ. ನಾನು ಸಾರಿಗೆ ಸಚಿವನಾಗಿದ್ದಂಥ ಕಾಲದಲ್ಲಿ ಸಭೆಯನ್ನು ಕರೆಸಿದ್ದೆ. ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ಬೆಂಗಳೂರು ನಗರ ಕಾರ್ಪೋರೇಷನ್‌ರವರು ಒಳ್ಳೆ ದುಡ್ಡು ಕೇಳುತ್ತಿದ್ದಾರೆ. ಆದ್ದರಿಂದ ತಮ್ಮನ್ನು ಕೇಳುವುದು, ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಸಚಿವರಾದ ತಾವು ಸಹ ಕುಳಿತುಕೊಂಡು ಅಧಿಕಾರಿಗಳನ್ನು ಕರೆಸಿ ದುಡ್ಡು ಕೊಡುವ ಬಗ್ಗೆ ನಿರ್ಧಾರ ಮಾಡಿ. ಅವರು ೭-೮ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅಷ್ಟು ದುಡ್ಡನ್ನು ಕೊಡುವುದಕ್ಕಾಗುವುದಿಲ್ಲ. ೫೦ ಲಕ್ಷವೊ ಅಥವಾ ಒಂದು ಕೋಟಿ ರೂಪಾಯಿಗಳಲ್ಲಿಯೇ ಅದನ್ನು ಬಗೆಹರಿಸಿಕೊಳ್ಳಬಹುದು. ಆರೀತಿ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:— ಮಾನ್ಯ ಅಧ್ಯಕ್ಷರೇ ಮಿಟಿಂಗ್ ೧೩-೧೦-೭೮ರಲ್ಲಿ ನಡೆದಿದೆ. ತಾವೇ ಅಧ್ಯಕ್ಷತೆ ವಹಿಸಿದ್ದು. ಆದರೆ ಆ ಮಿಟಿಂಗ್‌ನಲ್ಲಿ ದುಡ್ಡಿನ ವಿಚಾರ ಬರಲಿಲ್ಲ. ಮಿಟಿಂಗ್‌ನಲ್ಲಿ ಏನು ಹೇಳಿದ್ದಾರೆಂದರೆ "ಬಿ" ಸ್ಟ್ರೀಟ್‌ನಲ್ಲಿ ೨೫ ಅಡಿ ಪಶ್ಚಿಮಕ್ಕೆ ಜಾಗವನ್ನು ವಿಸ್ತರಿಸಿ ಪಾಸಗಿಯವರಿಗೆ ಕೊಡುತ್ತೇವೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆಗ ದುಡ್ಡಿನ ವಿಚಾರ ಏನೂ ಬಂದಿರಲಿಲ್ಲ. ಬಹುಶಃ ನಮ್ಮ ಪ್ರೊಸೀಡಿಂಗ್ಸ್ ಪ್ರಕಾರ ಆದು ಆಗಲಿಲ್ಲ ಇನ್ನೊಂದು ಸಾರಿ ಬೇಕಾದರೆ ನಾನು ಕಾರ್ಪೊರೇಷನ್ ಕಮಿಷನರ್ ಜೊತೆಯಲ್ಲಿ ಮಾತನಾಡುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರು ಹೇಳಿದ ಹಾಗೆ ಕಳಾಸಿಪಾಳ್ಯಂ ಬಸ್‌ಸ್ಟಾಂಡ್ ಒಂದೇ ಅಲ್ಲ. ಬೆಂಗಳೂರಿನಲ್ಲಿ ಶಿವಾಜಿನಗರ ಬಸ್‌ಸ್ಟಾಂಡ್ ಇದೆ. ಅಲ್ಲಿಂದ ಬೇರೆ ಕಡೆಗೆ ಬಸ್‌ನ ಸೌಲಭ್ಯ ಕೊಡಿ ಎಂದರೆ ಜಾಗದ ಅನುಕೂಲ ಅಲ್ಲಿ ಇಲ್ಲವೆಂದು ಹೇಳುತ್ತಾರೆ. ತಾವು ಆ ಒಗ್ಗೆಯೂ ಕ್ರಮ ತೆಗೆದು ಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ನಮ್ಮ ಸರ್ಕಾರ ಬಂದ ಮೇಲೆ ನಾನು ಸಾರಿಗೆ ಸಚಿವನಾದಮೇಲೆ ಶಿವಾಜಿನಗರ ಬಸ್‌ಸ್ಟಾಂಡಿಗೆ ಭೇಟಿ ನೀಡಿದ್ದೇನೆ ಈಗಾಗಲೇ ಕಾರ್ಪೊರೇಷನ್‌ನವರು ನಮ್ಮ ಕೆ. ಎಸ್. ಆರ್ ಟಿ. ಸಿ. ಗೆ ಆ ಜಾಗವನ್ನು ಬಿಟ್ಟುಕೊಟ್ಟಿದ್ದಾರೆ. ಸುಮಾರು ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಲ್ಲಿ ಹೊಸ ಬಸ್‌ಸ್ಟಾಂಡ್ ಕಟ್ಟಲಿಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಆದಷ್ಟು ಬೇಗ ಆ ಬಸ್‌ಸ್ಟಾಂಡ್ ಕಟ್ಟಲಿಕ್ಕೆ ನಾವು ಸರ್ವಪ್ರಯತ್ನವನ್ನು ಮಾಡುತ್ತೇವೆಂದು ಹೇಳುತ್ತೇನೆ.

ಸಂಖ್ಯ ಹಾಗೂ ಪುತ್ತೂರು ತಾಲ್ಲೂಕುಗಳಲ್ಲಿನ ರಸ್ತೆಗಳು ಹಾಗೂ ಸೇತುವೆಗಳು

೨೧೭. ಶ್ರೀ ಕೆ ಕುಶಾಲ, (ಸುಳ್ಯ).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯಾ ತಾಲ್ಲೂಕು ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಅಂತರಜಿಲ್ಲಾ ರಸ್ತೆ ಮತ್ತು ಅಂತಹ ರಸ್ತೆಗಳಲ್ಲಿ ಬರುವ ಸೇತುವೆಗಳ ಸಂಖ್ಯೆ ಎಷ್ಟು ? ಮತ್ತು ಆ ರಸ್ತೆಗಳ ಬಟ್ಟು ಉದ್ದಳತೆ ಎಷ್ಟು ?

ಶ್ರೀ ಬಿ. ಪುಟ್ಟಸ್ವಾಮಿಗೌಡ, (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).

ಅ) ಲೋಕೋಪಯೋಗಿ ಇಲಾಖೆಗೆ ಸಂಬಂದಿಸಿ	ದಕ್ಷಿಣ ಕನ್ನಡ ಜಿಲ್ಲಾಪರಿಷತ್‌ಗೆ ಸಂಬಂಧಿಸಿದಂತೆ
ದಂತೆ ಸುಳ್ಯ ತಾಲ್ಲೂಕು.	ಸುಳ್ಯ ತಾಲ್ಲೂಕು.
ಅಂತರ ಜಿಲ್ಲಾ ರಸ್ತೆ.	ಅಂತರ ಜಿಲ್ಲಾ ರಸ್ತೆ.
೧) ಮೈಸೂರು–ಬಂಟ್ವಾಳ ರಸ್ತೆ (ರಾಜ್ಯ ಹೆದ್ದಾರಿ)ಯ ಭಾಗ–೩೭.೭೦ ಕಿ.ಮೀ. ಸೇತುವೆಗಳು–೫	೧) ನಡುಗಲ್ಲು–ಕಲ್ಮಕಾರು ರಸ್ತೆ–೧೮.೨೦ ಕಿ.ಮೀ. ಸೇತುವೆಗಳು–೧ ೨) ಅರಂತೋಡು ಭಾಗಮಂಡಲ ರಸ್ತೆ ೭.೮೦ ಕಿ. ಮೀ. ಸೇತುವೆಗಳು–೪
ಪುತ್ತೂರು ತಾಲ್ಲೂಕು.	ಪುತ್ತೂರು ತಾಲ್ಲೂಕು.
ಅಂತರ ಜಿಲ್ಲಾ ರಸ್ತೆ :	ಅಂತರ ಜಿಲ್ಲಾ ರಸ್ತೆ :
೧) ಮೈಸೂರು–ಬಂಟ್ವಾಳ ರಸ್ತೆ (ರಾಜ್ಯ ಹೆದ್ದಾರಿ)ಯ ಭಾಗ–೩೪.೨೦ ಕಿ ಮೀ. ಸೇತುವೆಗಳು–೭	ಯಾವುದೇ ಅಂತರ ಜಿಲ್ಲಾ ರಸ್ತೆ ಇರುವುದಿಲ್ಲ.
೨) ಜೆಸಲ್ ಫಾಟ್ ರಸ್ತೆ (ಜಿಲ್ಲಾಮುಖ್ಯ ರಸ್ತೆ) –೫೧.೨೦ ಕಿ.ಮೀ. ಸೇತುವೆಗಳು–೮	

ಶ್ರೀ ಕೆ. ಕಂಶಾಲ.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿದ ಅಂತರ್ ಜಿಲ್ಲಾ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದೇ ಮತ್ತು, ಅದರ ದುರಸ್ತಿ ಕಾರ್ಯವನ್ನು ತುರ್ತಾಗಿ ಮಾಡುತ್ತಾರೆಯೇ ಎಂದು ಕೇಳುತ್ತೇನೆ

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಈ ಬಗ್ಗೆ ಪ್ರಸ್ತಾವನೆ ನಡೆಯುತ್ತಿದೆ. ಆದರ ಪ್ರೊಸೀಜರ್ ಮುಂಗಿದ ನಂತರ ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿಕೊಂಡು ಸರ್ಕಾರದ ವತಿಯಿಂದ ಮಾಡುತ್ತೇವೆಂದು ಹೇಳುತ್ತೇನೆ.

ಅಫಜಲ್‌ಪುರ ತಾಲ್ಲೂಕಿನಲ್ಲಿರುವ ರಸ್ತೆಗಳು

(೭೦) ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಫಜಲ್‌ಪುರ್ ತಾಲ್ಲೂಕಿನಲ್ಲಿರುವ ದತ್ತಾತ್ರೇಯ ದೇವಸ್ಥಾನಕ್ಕೆ ಯಾತ್ರಿಕರು ಬಂದು ಹೋಗುವ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ಸರಿಪಡಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿರುವ ದತ್ತಾತ್ರೇಯ ದೇವಸ್ಥಾನಕ್ಕೆ ಹೋಗಲು ಇರುವ ರಸ್ತೆಯು ದುಸ್ಥಿತಿಯಲ್ಲಿರುವುದಿಲ್ಲ.

ಆ) ನಿರ್ವಹಣಾ ಅನುದಾನದ ಲಭ್ಯತೆಯನ್ನು ಅನುಸರಿಸಿ ರಸ್ತೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಮಾನ್ಯ ಅಧ್ಯಕ್ಷರೇ, ಅಫಜಲ್‌ಪುರದಿಂದ ದತ್ತಾತ್ರೇಯ ದೇವಸ್ಥಾನಕ್ಕೆ ಹೋಗುವ ರಸ್ತೆಯ ಬಗ್ಗೆ ದುಸ್ಥಿತಿಯಲ್ಲಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆದಿದ್ದೆ. ಆದರೆ ಅವರು ಆ ಪರಿಸ್ಥಿತಿಯಲ್ಲಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸರಿಯಾದ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿಲ್ಲವೆಂದು ನನಗನಿಸುತ್ತದೆ. ಏಕೆಂದರೆ ಆ ಪವಿತ್ರವಾದ ದತ್ತಾತ್ರೇಯ ದೇವಸ್ಥಾನಕ್ಕೆ ಪ್ರತಿದಿವಸ ಒಂದು ಸಾವಿರಕ್ಕೂ ಮೇಲ್ಪಟ್ಟು ಯಾತ್ರಿಕರು ಬಂದು ಹೋಗುತ್ತಿರುತ್ತಾರೆ. ರಸ್ತೆಗಳು ಬಹಳ ಚಿಕ್ಕದಾಗಿರುವುದರಿಂದ ಆ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದರಿಂದ ವಾಹನಗಳ